**ಜಾಹೀರಾತು**

# ಮೊಣಕಾಲು ಅಸ್ಥಿಸಂಧಿವಾತವನ್ನು ಅರಿತುಕೊಳ್ಳುವ ಬಗೆ

ದೇಹದ ಅಂಗಗಳಲ್ಲಿ ಭುಜದ ನಂತರ ಅತಿಹೆಚ್ಚು ಚಲನೆಗೆ ಒಳಪಡುವ ಎರಡನೆಯ ಅಂಗವೆಂದರೆ ಮೊಣಕಾಲು. ತೊಡೆಎಲುವಿನ ಕೆಳತುದಿ (ಫೆಮರ್) ಹಾಗೂ ಕಾಲ ಎಲುವಿನ ಮೇಲ್ಭಾಗ (ಟಿಬಿಯಾ) ಮತ್ತು ಮಂಡಿಚಿಪ್ಪು (ಪೆಟೆಲ) ಸಂಧಿಸುವ ಭಾಗ ಮೊಣಕಾಲು.

ಅಸ್ಥಿರಜ್ಜುಗಳಿಂದ ಈ ಭಾಗಗಳು ಒಟ್ಟಾಗಿ ಹಿಡಿದಿಡಲ್ಪಟ್ಟಿರುತ್ತವೆ. ಮೊಣಕಾಲಿನಲ್ಲಿ ಮೂರು ಭಾಗಗಳಿವೆ; ಒಳ (ಮೀಡಿಯಲ್), ಹೊರ (ಲ್ಯಾಟರಲ್) ಮತ್ತು ತೊಡೆ ಎಲುವು ಹಾಗೂ ಮಂಡಿಚಿಪ್ಪಿನ ನಡುಭಾಗ. ತೊಡೆ ಎಲುವಿನ ಕೆಳಭಾಗ ಹಾಗೂ ಕಾಲುಎಲುವಿನ ಮೇಲ್ಭಾಗಗಳು ಮೃದುವಾದ ಮೃದ್ವಸ್ಥಿಯಿಂದ ಮಾಡಲ್ಪಟ್ಟಿರುತ್ತವೆ. ಈ ಮೂರು ವಿಭಾಗಗಳಲ್ಲಿ, ಎಲ್ಲೇ ಆದರೂ ಮೃದುವಾದ ಮೃದ್ವಸ್ಥಿಯ ಭಾಗದಲ್ಲುಂಟಾಗುವ ಸವಕಳಿಯಿಂದಾಗಿ ಮೊಣಕಾಲು ಅಸ್ಥಿಸಂಧಿವಾತ ಉಂಟಾಗುತ್ತದೆ.

ಮೊಣಕಾಲು ಒಸ್ಟಿಯೊಅರ್ಥರೈಟಿಸ್ ಪ್ರಾಥಮಿಕ ಹಾಗೂ ದ್ವಿತೀಯ ಎಂಬ ಎರಡು ಹಂತಗಳಲ್ಲಿ ಗುರುತಿಸಲ್ಪಡುತ್ತದೆ. ಪ್ರಾಥಮಿಕ ಹಂತವು ವಯಸ್ಸಾಗುವ ಪ್ರಕ್ರಿಯೆಯಿಂದ, ಅಥವಾ ದೀರ್ಘಕಾಲೀನ ರೋಗಗಳು ಮುಂತಾದವುಗಳಿಂದ ಉಂಟಾಗಬಹುದು. ಅಪಘಾತ, ಮೃದ್ವಸ್ಥಿಯಲ್ಲುಂಟಾದ ಗಾಯಗಳನ್ನು ಸರಿಯಾಗಿ ಆರೈಕೆ ಮಾಡದೇ ಇರುವುದು, ರ್ಹುಮಟಾಯ್ಡ್ ಅರ್ಥರೈಟಿಸ್‌ನಂತಹ ಅಂಗಾಂಶ ಸಂಬಂಧಿತ ಇತರ ರೋಗಗಳು, ಎಸ್‌ಎಲ್‌ಇ (ಸಿಸ್ಟಮ್ಯಾಟಿಕ್ ಲುಪಸ್ ಎರಿಥಮ್ಯಾಟೋಸಿಸ್) ಮುಂತಾದ ಕಾರಣಗಳಿಂದ ದ್ವಿತೀಯ ಹಂತದ ಒಸ್ಟಿಯೊಅರ್ಥರೈಟಿಸ್ ಉಂಟಾಗುತ್ತದೆ.

ಪ್ರಾಥಮಿಕ ಹಂತದ ಒಸ್ಟಿಯೊಅರ್ಥರೈಟಿಸ್ ಇದು ಅಸ್ಥಿಸಂಧಿವಾತದ ಸಾಮಾನ್ಯ ರೂಪವಾಗಿದ್ದು 90% ರಷ್ಟು ಅಸ್ಥಿಸಂಧಿವಾತದ ಕೇಸುಗಳನ್ನು ಒಳಗೊಂಡಿರುತ್ತದೆ. ಮೊಣಕಾಲಿನ ಒಳಭಾಗದಲ್ಲಿ ಪ್ರಾರಂಭವಾಗುವ ಪ್ರಾಥಮಿಕ ಅಸ್ಥಿಸಂಧಿವಾತವು ನಂತರದಲ್ಲಿ ತೊಡೆ ಎಲುವು ಹಾಗೂ ಮಂಡಿಚಿಪ್ಪಿನ ಎಲುವಿನ ನಡು ಭಾಗಕ್ಕೆ ಪಸರಿಸುತ್ತದೆ. ಕೊನೆಯಲ್ಲಿ ಹೊರ ಭಾಗವನ್ನೂ ಆಕ್ರಮಿಸಿಕೊಳ್ಳುತ್ತದೆ.

ಎಕ್ಸ್–ರೇಯ ಆಧಾರದಿಂದ, ಒಸ್ಟಿಯೊಅರ್ಥರೈಟಿಸ್ ತೊಂದರೆಯನ್ನು ಈ ಕೆಳಗಿನಂತೆ ವಿಭಾಗಿಸಬಹುದು:

**ಗ್ರೇಡ್ 1** ಮೊಣಕಾಲಿನ ಒಳಭಾಗ ಹಾಗೂ ಸಾಮಾನ್ಯವಾಗಿ ಇತರ ವಿಭಾಗಗಳು ಅತ್ಯಲ್ಪವಾಗಿ ತೊಂದರೆಗೆ ಒಳಗಾಗಿರುವುದು.

**ಗ್ರೇಡ್ 2** ಮೊಣಕಾಲಿನ ಒಳಭಾಗವು ಸಾಧಾರಣದಿಂದ ಗಂಭೀರವಾಗಿ ಬಾಧಿತವಾಗಿರುವುದು ಹಾಗೂ ಇನ್ನುಳಿದ ಭಾಗಗಳು ಅತ್ಯಲ್ಪವಾಗಿ ಅಥವಾ ಯಾವುದೇ ಬಾಧೆಗೆ ಒಳಗಾಗದೇ ಇರುವುದು.

**ಗ್ರೇಡ್ 3** – ಮೊಣಕಾಲಿನ ಒಳಭಾಗವು ಗಂಭೀರವಾಗಿ ಬಾಧಿತವಾಗಿರುವುದು ಹಾಗೂ ಇನ್ನುಳಿದ ಭಾಗಗಳು ಸಾಧಾರಣವಾಗಿ ಬಾಧೆಗೊಳಗಾಗಿರುವುದು.

**ಗ್ರೇಡ್ 4** ಎಲ್ಲ ಮೂರು ವಿಭಾಗಗಳೂ ಗಂಭೀರವಾಗಿ ಬಾಧೆಗೆ ಒಳಗಾಗಿರುವುದು.

**ಒಸ್ಟಿಯೊಅರ್ಥರೈಟಿಸ್‌ನ ಬಾಧಿತ ಪ್ರಮಾಣದ ಆಧಾರದಿಂದ ಚಿಕಿತ್ಸಾ ಯೋಜನೆಯನ್ನು ರೂಪಿಸಲಾಗುವುದು:**

**ಗ್ರೇಡ್ 1** ದೈನಂದಿನ ಜೀವನದಲ್ಲಿ ಬದಲಾವಣೆಗಳನ್ನು ತರುವ ಚಟುವಟಿಕೆಗಳು (ಚಕ್ಕಳಬಕ್ಕಳ ಹಾಕಿ ಕುಳಿತುಕೊಳ್ಳುವುದು, ಕಾಲಮೇಲೆ ಕಾಲುಹಾಕಿ ಕೂರುವುದು, ಹಾಗೂ ಹೆಚ್ಚಾಗಿ ಮೆಟ್ಟಿಲುಗಳನ್ನು ಹತ್ತುವುದು ಮುಂತಾದ ಚಟುವಟಿಕೆಗಳನ್ನು ಮಾಡದೇ ಇರುವುದನ್ನು ಇದು ಒಳಗೊಳ್ಳುತ್ತದೆ.) ಹಾಗೂ ಫಿಸಿಯೋಥೆರಪಿ

**ಗ್ರೇಡ್ 2** ಗ್ರೇಡ್1 ಲ್ಲಿ ಸೂಚಿತವಾದ ಚಿಕಿತ್ಸೆ ಹಾಗೂ ಹಾಗೂ ಸಂದುಗಳಿಗೆ ಇಂಜೆಕ್ಷನ್ ನೀಡುವುದು (ವಾಸ್ಕೊಸಪ್ಲಿಮೆಂಟೇಶನ್). ಒಂದು ವೇಳೆ ಈ ಚಿಕಿತ್ಸೆಯ ನಂತರವೂ ನೋವು ಉಳಿದಿದ್ದ ಪಕ್ಷದಲ್ಲಿ ಗ್ರೇಡ್ 3 ಚಿಕಿತ್ಸೆಯನ್ನು ಪರಿಗಣಿಸಲಾಗುವುದು.

**ಗ್ರೇಡ್ 3** ಗ್ರೇಡ್2 ದಲ್ಲಿ ಸೂಚಿತವಾದ ಚಿಕಿತ್ಸೆ ಹಾಗೂ ಮೊಣಕಾಲು ರೀಸರ್ಫೇಸಿಂಗ್ ಸರ್ಜರಿ/ಯುನಿಕಾಂಡಿಲರ್ ನೀ ರಿಪ್ಲೇಸ್‌ಮೆಂಟ್

**ಗ್ರೇಡ್ 4** ಸಂಪೂರ್ಣ ಮೊಣಕಾಲು ಬದಲಾವಣೆ

**ನೀ ರೀಸರ್ಫೇಸಿಂಗ್ ಸರ್ಜರಿ** – ನಮ್ಮ ಆಸ್ಪತ್ರೆಯ ಮುಖಾಂತರ ಕರ್ನಾಟಕದಲ್ಲಿಯೇ ಮೊದಲ ಬಾರಿಗೆ ಪರಿಚಯಿಸಲಾಗಿರುವ ನೀ ರೀಸರ್ಫೇಸಿಂಗ್ ಸರ್ಜರಿಯು ರೋಗದಿಂದ ನಷ್ಟಕ್ಕೊಳಗಾದ ಮೃದ್ವಸ್ಥಿಯ ಕಾರ್ಯವನ್ನು ನೆರವೇರಿಸುವಂತೆ ವಿನ್ಯಾಸಗೊಳಿಸಲ್ಪಟ್ಟಿದೆ.

ರೋಗಿಗಳು ಫಿಸಿಯೊಥೆರಪಿ ಹಾಗೂ ನೋವುನಿವಾರಕ ಮಾತ್ರೆಗಳನ್ನು ತೆಗೆದುಕೊಂಡು ರೋಗನಿವಾರಣೆಗೆ ಪ್ರಯತ್ನಿಸುತ್ತಿರುವ ಸಂಧರ್ಭದಲ್ಲಿ ನೀ ಸರ್ಫೇಸಿಂಗ್ ಶಸ್ತ್ರಚಿಕಿತ್ಸೆಯು ಪ್ರಮುಖವಾದ ಸಂಶೋಧನೆಯಾಗಿದೆ. ಇತ್ತೀಚಿನ ಅಧ್ಯಯನಗಳ ಪ್ರಕಾರ ಮಧುಮೇಹದ ನಂತರ ಭಾರತೀಯ ಜನಸಂಖ್ಯೆಯನ್ನು ಕಾಡುತ್ತಿರುವ ಎರಡನೇ ಅತಿಹೆಚ್ಚಿನ ರೋಗವೆಂದರೆ ಒಸ್ಟಿಯೊಅರ್ಥರೈಟಿಸ್.

ಸಾಂಪ್ರದಾಯಿಕ ಮೌಖಿಕ ಚಿಕಿತ್ಸೆಗಳ ಅಸಫಲತೆಯ ನಂತರದಲ್ಲಿ, ಈ ಶಸ್ತ್ರಚಿಕಿತ್ಸೆಯು ಮೊಣಕಾಲು ಸಂದಿನ ಪ್ರಾಥಮಿಕ ಹಾಗೂ ಸಾಧಾರಣ ಹಂತದಲ್ಲಿರುವ ಸಂಧಿವಾತಕ್ಕೆ ಕೈಗೆಟಕುವ ಬೆಲೆಯಲ್ಲಿ ಚಿಕಿತ್ಸೆಯನ್ನು ನೀಡಬಲ್ಲುದಾಗಿದೆ. ರೋಗಿಗಳು ತಮ್ಮ ದೈನಂದಿನ ಕಾರ್ಯಚಟುವಟಿಕೆಗಳಿಗೆ ಅತ್ಯಂತ ಶೀಘ್ರವಾಗಿ ಹಿಂದಿರುಗುವಂತೆ ಮಾಡುವುದು ಈ ಶಸ್ತ್ರಚಿಕಿತ್ಸೆಯ ಪ್ರಮುಖ ಪ್ರಯೋಜನ. ಶಸ್ತ್ರಚಿಕಿತ್ಸಾನಂತರ ರೋಗಿಗಳು ಭಾರತೀಯ ಸಂಸ್ಕೃತಿಯ ದೈನಂದಿನ ಜೀವನದ ಮಹತ್ವದ ಭಾಗವಾದ ಚಕ್ಕಳಬಕ್ಕಳ ಹಾಕಿ ಕುಳಿತುಕೊಳ್ಳುವುದು, ಕಾಲಮೇಲೆ ಕಾಲು ಹಾಕಿ ಕುಳಿತುಕೊಳ್ಳುವುದು ಮುಂತಾದವುಗಳನ್ನು ಮಾಡಲು ಸಹಾಯಮಾಡುತ್ತದೆ.

**ಸಂಪೂರ್ಣ ಮೊಣಕಾಲು ಬದಲಾವಣೆ:** ಗಂಭೀರವಾಗಿ ಹಾನಿಗೊಳಗಾದ ಮೊಣಕಾಲಿಗೆ, ಸಂಪೂರ್ಣ ಮೊಣಕಾಲು ಬದಲಾವಣೆ ಶಸ್ತ್ರಚಿಕಿತ್ಸೆಯು ಅತ್ಯುತ್ತಮ ಆಯ್ಕೆಯಾಗಿರುತ್ತದೆ.

ಒಸ್ಟಿಯೊ ಅರ್ಥರೈಟಿಸ್‌ನ ಎಲ್ಲ ಸಮಸ್ಯೆಗಳೂ ಒಂದೇ ತೆರನಾಗಿರುವುದಿಲ್ಲ. ಅಂತೆಯೆ ಎಲ್ಲ ಮೊಣಕಾಲುಗಳೂ ಒಂದೇ ರಿತಿಯವಾಗಿರುವುದಿಲ್ಲ. ಹಾಗಾಗಿ ಸೂಕ್ತವಾದ ಚಿಕಿತ್ಸೆಯನ್ನು ಆರಂಭಿಸುವ ಮೊದಲು ಪ್ರತಿ ರೋಗಿಯ ನೋವು ಹಾಗೂ ಚಟುವಟಿಕಾ ಪ್ರಮಾಣವನ್ನು ಕೂಲಂಕುಶವಾಗಿ ಪರಿಕ್ಷಿಸಿಯೇ ತೀರ್ಮಾನ ಕೈಗೊಳ್ಳಲಾಗುತ್ತದೆ.



**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಫೋರ್ಟಿಸ್ ಹಾಸ್ಪಿಟಲ್,** ನಂ.111, ವೆಸ್ಟ್ ಆಫ್ ಕಾರ್ಡ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್ ಜಂಕ್ಷನ್ ಎದುರು, ಬೆಂಗಳೂರು. ಕರ್ನಾಟಕ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 9901606004 ಮತ್ತು 9916015111 ಇ–ಮೇಲ್: enquiries@fortishealthcare.com